ಪರವಾನಗಿಗಳನ್ನು ನೀಡಲಾಗಿರುವ ಹೊಸ ವೈನ್ ಸ್ಟೋರ್ಸ್‌ಗಳ ಬಗ್ಗೆ.

386 – ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1991 ಅಂತ್ಯದವರೆಗೆ ಬೆಂಗಳೂರು ನಗರದಲ್ಲಿನ ವೈನ್ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಜನವರಿಯಿಂದ ಡಿಸೆಂಬರ್ 1990 ರ ಅಂತ್ಯದವರೆಗೆ ಪರವಾನಗಿಗಳನ್ನು ನೀಡಲಾಗಿರುವ ಹೊಸ ಅಂಗಡಿಗಳ ಸಂಖ್ಯೆ ಎಷ್ಟು?

ಶ್ರೀ ಕೆ. ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು)

ಅ) 796

ಆ) 72

ದೊಡ್ಡ ಬೊಮ್ಮನಹಳ್ಳಿ ಕೆರೆಯ ದುರಸ್ತಿ ಕಾರ್ಯ.

378 – ಶ್ರೀ ಸಿ. ಭೈರೇಗೌಡ (ವೇಮಗಲ್) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ತಾಲ್ಲೂಕು ದೊಡ್ಡಿಯೂರು ಬಳಿ ಹೊಸಕೆರೆ ನಿರ್ಮಿಸುವ ಮತ್ತು ವೇಮಗಲ್ ಕ್ಷೇತ್ರದ ಚಿಂತಾಮಣಿ ತಾಲ್ಲೂಕು, ದೊಡ್ಡ ಬೊಮ್ಮನಹಳ್ಳಿ ಕೆರೆಯ ಏರಿಯನ್ನು ದುರಸ್ತಿ ಪಡಿಸುವ ಯೋಜನೆ ಏನಾದರೂ ಇದೆಯೇ;

ಆ) ಹಾಗಿದ್ದಲ್ಲಿ, ಈ ಎರಡು ಕಾಮಗಾರಿಗಳಿಗಾಗಿ ಅಂದಾಜುಗಳನ್ನು ಯಾವಾಗ ತಯಾರಿಸಲಾಯಿತು.

ಇ) ಕೋಲಾರ ಜಿಲ್ಲಾ ಪರಿಷತ್ತಿನಿಂದ ಸಕ್ಷಮ ಪ್ರಾಧಿಕಾರಿಗೆ ಮಂಜೂರಾತಿಗಾಗಿ ಸಲ್ಲಿಸಲಾಗಿರುವ ಈ ಎರಡು ಕಾಮಗಾರಿಗಳ ಅಂದಾಜು ಸಂಖ್ಯೆ.

ಈ) ಈ ಅಂದಾಜುಗಳು ಮಂಜೂರಾಗಿದೆಯೆ, ಇಲ್ಲದಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ಮತ್ತು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ, (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹೌದು

1) ದೊಡ್ಡಯೂರು ಬಳಿ ಹೊಸಕೆರೆ ನಿರ್ಮಾಣದ ಅಂದಾಜನ್ನು ದಿನಾಂಕ 23-8-90 ರಂದು ತಯಾರಿಸಲಾಗಿದೆ.

2) ಚಿಂತಾಮಣಿ ತಾಲ್ಲೂಕು ದೊಡ್ಡ-ಬೊಮ್ಮನಹಳ್ಳಿ ಕೆರೆಯ ಜೀರ್ಣೋದ್ಧಾರದ ಅಂದಾಜನ್ನು ದಿನಾಂಕ 26-11-90 ರಂದು ತಯಾರಿಸಲಾಗಿದೆ.

ಒಂದು ಕಾಮಗಾರಿಗೆ ಒಂದು ಅಂದಾಜು.

1) ದೊಡ್ಡಿಯೂರು ಬಳಿ ಹೊಸಕೆರೆ ನಿರ್ಮಾಣದ ಅಂದಾಜ ಮಂಜೂರಾಗಿದ್ದು ಒಂದುವಾರದಲ್ಲಿ ಕಾಮಗಾರಿ ಕೆಲಸವನ್ನು ಪ್ರಾರಂಭಿಸಲಾಗುವುದು.

2) ದೊಡ್ಡ ಬೊಮ್ಮನಹಳ್ಳಿ ಕೆರೆ ಜೀರ್ಣೋದ್ಧಾರ ಕಾಮಗಾರಿಯ ಅಂದಾಜನ್ನು ಪರಿಶೀಲಿಸಲಾಗುತ್ತಿದೆ.

ಅಂಬೇಡ್ಕರ್ ಜನ್ಮ ಶತಾಬ್ಧಿ ವರ್ಷದಲ್ಲಿ ವಿಶೇಷ ಯೋಜನೆಗಳು.

1335 – ಶ್ರೀ ಮನೋಹರ್ ಐನಾಪುರ (ಬೇಳ್ಳೂಳ್ಳಿ). ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?